ಇರೋದೆ ಅರ್ಧ ಎಕರೆ ಹೊಲ. ಕಾಡಿ ಬೇಡಿ ಅವರಿವರು ಅಕ್ಕಪಕ್ಕದ ಹೊಲದ ಕೃಷಿಹೊಂಡದಿಂದ ಹೊತ್ತು ಹುಯ್‌ನೀರು ಹುಯಿದು ಕೀರೆಸೊಪ್ಪು, ಸಬ್ಬಸಿಗೆಸೊಪ್ಪು, ದಂಟಿನಸೊಪ್ಪು, ಬೆಂಡೆ, ಬದನೆ, ಮೆಣಸು, ಟೊಮೆಟೊ, ಅವರೆ, ತೊಗರಿ ನಾನಾ ತರದ ಬೆಳೆ ಬೆಳೆದಿದ್ದೊ... ಹಗಲೆಲ್ಲ ಅಲ್ಲಿಯೇಬಿದ್ದು ಕೆರಕಂದು. ಈ ಕೋಣ ಅದನೋಡಿ ಅಲ್ಲಿಗೋಗಿ ಈಡಾಡಿ ಮೇದು, ತುಳಿದು ಹಾಳುಮಾಡಿದೆ. ನೋಡಿ ಆಕಾಶ ತಲೆಗೆ ಕೌಚಿದಂಗೆ ತಲೆಮ್ಯಾಲೆ ಕೈಹೊತ್ತು ಕೂತೊ. ಮುಂದಿನ ಬೆಳೆವರೆಗು ಜೀವನ ಹೆಂಗೇಂತ? ಒಂದು ಮಾತು ಅನಲಿಲ್ಲ ಒಂದು ಮಾತು ಆಡಲಿಲ್ಲ, ದುರಗವ್ವನ ತವರು ಮನೆದೇವರು ಮಾರವ್ವ" ಅಂತ ಆದದ್ದು ಬಿಡಿಸಿಟ್ಟರು ಮಾರಳ್ಳಿ ಹಿರಿಯ.

"ಅದಕ್ಕೆ ನಾವೇನು ಮಾಡಾಕೆ ಆಗುತ್ತೆ?"

"ನಮ್ಮೂರ ಕ್ವಾಣ ನಮಿಗೆ ಕೊಡಾಕೆ ನಿಮ್ಮದೇನು ತಕರಾರು?"

ಸುತ್ತಕೂತವರ ಎದುರು, ಇಸ್ಪೀಟು ಎಲೆಗಳ ಬರ ಬರ ಎಸೆದು ಬಿಟ್ಟಂಗೆ, ತಲೆಗೊಂದೊಂದು ಮಾತು ಬಿಟ್ಟರು ಹಾರುಹಳ್ಳಿಯ ಹುಡುಗರು.

"ನಾವು ಇಲ್ಲಾ ಅನುತಿಲ್ಲ. ನಿಮಗೆ ಕೊಟ್ಟಮ್ಯಾಲೆ ಮತ್ತೆ ತಿರುಗಿ ಇಲ್ಲಿಗೆ ಬಂದು, ಇಲ್ಲಿ ಅನಾಹುತ ಮಾಡಲ್ಲ ಅನ್ನೋದಕ್ಕೆ ಏನು ಗ್ಯಾರಂಟಿ? ಆಗೋ ಅನಾಹುತಕ್ಕೆ ಯಾರು ಹೊಣೆ?"

"ಅದರ ಲುಕ್ಸಾನು ನೀವು ಕೊಡ್ತೀರಾ?" ಮಾರಳ್ಳಿ ಹುಡುಗರು ಸುಮ್ಮನೆ ಕೂರಲಿಲ್ಲ.

"ಊರ ಮಾರಮ್ಮಗೆ ಬಿಟ್ಟಕ್ವಾಣನ ಕಾಯೋದುಂಟ? ಮಾರಿಗೆಬಿಟ್ಟ ಕ್ವಾಣ ಎಲ್ಲಿ ಯಾರ ಹೊಲದಲ್ಲಿ ಏನೇ ಮೇದರು ಯಾರೂ ಕೇಳಂಗಿಲ್ಲ" ಹಾರುವಳ್ಳಿಯವರ ಮಾತು.

"ಅದು ಬೇಕಾದರೆ ನಿಮ್ಮೂರಾಗೆ ಮೇಯಲಿ. ನಾವ್ಯಾಕೆ ಹಾಳಾಗಬೇಕು, ನೋವು ಪಡಬೇಕು ಹೇಳಿ?" ಮಾರಳ್ಳಿಯವರ ಮಾತು.

"ಅದು ಹಿಂದಿನ ಕಾಲದಿಂದ ಬಂದದ್ದು." ಹಾರುವಳ್ಳಿಯವರ ಉತ್ತರ.

"ಅಪ್ಪ ಹಾರುವಳ್ಳಿ ಹುಡುಗರಿರಾ ಇಲ್ಲಿ ಕೇಳಿ. ಕಾಳು ಬಿತ್ತೊ ಹೊತ್ತಿಗೆ ಕಾಯಿಲೆಬಿದ್ದ ಈ ಹಾಲಣ್ಣ. ಇರೋರೆ ಇಬ್ಬರು ಗಂಡ ಹೆಂಡತಿ. ಬ್ಯಾರೆ ಮಕ್ಕಳಿಲ್ಲ ಮರಿಯಿಲ್ಲ, ಆಸರೆಯಿಲ್ಲ ಆಪತ್ತಿಗಿಲ್ಲ. ಮುಂಗಾರು ಹೊತ್ತಿನ ಹದಕ್ಕೆ ರಾಗಿ ಬಿತ್ತಾಕು ಆಗದೆ ಹೊಲ ಬೀಳುಬಿತ್ತು. ನಂತರ ಬೀಜ ಬಿತ್ತೊ ಹಂಗಾಮು ಮೀರಿದಮ್ಯಾಲೆ, ಎಪ್ಪತ್ತು ದಿನಕೆ ಬರೋ ರಾಗಿ ಎಪ್ಪತ್ಗೆ ಬಿತ್ತಿದರು; ಬೆಳೆ ಬಾರದು ತಗಿಅತ್ಲಾಗೇಂತ ಹುರುಳಿ ಬಿತ್ತಿದ. ಮೇಲಿಂದ ಮೇಲೆ ಹದವಾಗಿ ಮಳೆನು ಹುಯ್ತು, ಬೆಳೆ ಚನ್ನಾಗಿನೆ ಬಂತು. ಪೊಗರುದಸ್ತಾಗಿ ಬೆಳೆದು ಕಾಯಿಗೆ ಏರಿತ್ತು. ಸೊಗಡೆದ್ದು ಹುರುಳಿ ಗಮಗಮ ಅಂತು. ವಾಸನೆ ಹಿಡಿದು ಬಂದ ಕ್ವಾಣ ಹೊಲಕ್ಕೆ ತೂರಿಕೊಂಡಿತು. ಮೂರುದಿನ ಹಗಲೂ ರಾತ್ರಿಯೆಲ್ಲಾ ಅಲ್ಲೆ ಮೇಯಿದು ಅಲ್ಲೆ ಮಲಗೋದು. ಪಕ್ಕದಲ್ಲಿಯೆ ಹರಿಯೋ ಹಳ್ಳದಲ್ಲಿ ನೀರು ಕುಡಿಯೋದು ಮತ್ತೆ ಮೇಯೋದು. ಈಗ ಹೋಗಿ ಅಟ್ಟಿದರೆ ಆಚೆ ಹೋದಂಗೆ ಹೋಗಿ, ಮತ್ತೆ ಬಂದು ಅಲ್ಲೇ ತಂಗೋದು. ಅದುಕು ಮೀರಿ ಜೋರಾಗಿ ಬಡಿಗೆ ಎತ್ತಿದರೆ ಕೆಕ್ಕರಿಸಿ ನೋಡಿ ಇವರತ್ತಲೆ ನುಗ್ಗೋದೆ? 'ಐಯ್ಯಯ್ಯಪೋ ಜೀವ ಉಳಿದರೆ ಸಾಕು' ಅಂತ ಓಡಿ ಬಂದರು, ಮತ್ತೆ ಹೊಲದಕಡೆ ಹೆಜ್ಜೆ ಇಡಲೇ ಇಲ್ಲ. ಹೊಲವ ವೈನಾಗಿ ಮೇಯ್ತು. ಸಗಣೆಹಾಕ್ತು. ಬಿತ್ತಿ ಬೆಳದವಗೆ ಸೆರೆ ಹುರುಳಿ ಉಳಿಸಲಿಲ್ಲ. ಈ ಹಾಲಣ್ಣನ ಗತಿಯೇನು? ಅವನ ಜೀವನ ಹೆಂಗೆ ಹೇಳಿ?

ಊರಲ್ಲಿಯೂ ಮನೆ ಮನೆಯವರು ದೊಡ್ಡ ಬಡಿಗೆ ಮನೆ ಮುಂದಿಟ್ಟುಕೊಂಡು ಹಗಲು ರಾತ್ರಿಕಾಯೋದೆ ಕೆಲಸವಾಗಿದೆ. ಇದರ ಕಾಟ ತಡಿಲಾರದೆ ಊರಿನ ಮನಿಗೊಂದಾಳು ಸೇರಿ, ಒಂದ್ ಪೆಟ್ಟೂಹಾಕದೆ, ಸುತ್ತುಗಟ್ಟಿ ಅಟ್ಟಿಸಿಕೊಂಡು ಬಂದು ಹಾಳು ಮನೇಲಿ ಹೊಗುವಂತೆ ಮಾಡಿ, ಹೊರಬರದಂತೆ ಅಡ್ಡಮರ ಇಟ್ಟು, ದಿಮ್ಮಿಗಳ ಆನಿಸಿ, ಮೇವು ನೀರು ಅಲ್ಲೆ ಕೊಟ್ಟಿದೇವಿ. ಇಷ್ಟಾದರೂ